ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆ

806 (1150) ಶ್ರೀ ಸಂಪಗಿ ಎನ್ (ಬಾಗೇಪಲ್ಲಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆಗಳಿಗಾಗಿ ಕಳೆದ ಮೂರು ವರ್ಷಗಳಲ್ಲಿ (2007–08, 2008–09 & 2009–10) ಯಾವ ಯಾವ ಯೋಜನೆಗಳನ್ನು ತಮ್ಮ ಇಲಾಖೆಯು ಅನುಷ್ಠಾನಕ್ಕೆ ತಂದಿದೆ;

ಆ) ಕೇಂದ್ರ ಸರ್ಕಾರದ ಆಯವ್ಯಯದಲ್ಲಿ ಈ ಯೋಜನೆಗಳಿಗೆ ಎಷ್ಟು ಹಣವನ್ನು ಒದಗಿಸಲು ಆಯೋಜಿಸಲಾಗಿತ್ತು;

ಇ) ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ ಹಾಗೂ ಖರ್ಚು ಮಾಡಲಾಗಿದೆ;

ಈ) ಪೂರ್ಣ ಹಣವನ್ನು ಖರ್ಚು ಮಾಡದಿದ್ದಲ್ಲಿ ಕಾರಣಗಳೇನು?

ಉ) ಮೇಲ್ಕಾಣಿಸಿದ ಯೋಜನೆಯ ಮಾರ್ಗಸೂಚಿಗಳ ಪ್ರತಿಗಳನ್ನು/ ಪರಿಷ್ಕೃತ ಮಾರ್ಗಸೂಚಿಗಳೇನಾದರೂ ಇವೆಯೆ? ಇದ್ದಲ್ಲಿ ಒದಗಿಸಲು ಕೋರಿದೆ;

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು) :

ಅ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಕಳೆದ ಮೂರುವರ್ಷ (2007–08, 2008–09 ಮತ್ತು 2009–10) ಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಕೇಂದ್ರ ಪುರಸ್ಕೃತ ಮತ್ತು ಕೇಂದ್ರ ಯೋಜನೆಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ಕೇಂದ್ರ ಪುರಸ್ಕೃತ ಮತ್ತು ಕೇಂದ್ರ ಯೋಜನೆಗಳಿಗಾಗಿ 2007–08, 2008–09 ಮತ್ತು 2009–10ನೇ ಸಾಲಿನಲ್ಲಿ ನಿಗದಿ ಮಾಡಿರುವ ಅನುದಾನ ಈ ಕೆಳಕಂಡಂತಿವೆ. (ಕೇಂದ್ರ ಮತ್ತು ರಾಜ್ಯದ ಪಾಲು ಸೇರಿ).

(ರೂ. ಕೋಟಿಗಳಲ್ಲಿ)

207–08	2008–09	2009–10
1681.66	2415.97	3959.19

ಇ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ಕೇಂದ್ರ ಪುರಸ್ಕೃತ ಮತ್ತು ಕೇಂದ್ರ ಯೋಜನೆಗಳಿಗಾಗಿ 2007–08, 2008–09 ಮತ್ತು 2009–10ನೇ ಸಾಲಿನಲ್ಲಿ ಬಿಡುಗಡೆ ಹಾಗೂ ಖರ್ಚು ಮಾಡಿರುವ ಅನುದಾನ ಈ ಕೆಳಕಂಡಂತಿವೆ (ಕೇಂದ್ರ ಮತ್ತು ರಾಜ್ಯದ ಪಾಲು ಸೇರಿ).

(ರೂ. ಕೋಟಿಗಳಲ್ಲಿ)

2007–08		2008–09		2009–10	
ಬಿಡುಗಡೆ	ಖರ್ಚು	ಬಿಡುಗಡೆ	ಖರ್ಚು	ಬಿಡುಗಡೆ	ಖರ್ಚು
1633.12	1790.65	2187.64	2070.05	3796.40	3476.36

ಖರ್ಚು ಆರಂಭ ಶಿಲ್ಕನ್ನು ಒಳಗೊಂಡಿರುತ್ತದೆ.

ಇ) ಕೇಂದ್ರ ಸರ್ಕಾರವು ಹಣಕಾಸು ವರ್ಷ ಅಂತ್ಯದಲ್ಲಿ ಅನುದಾನ ಬಿಡುಗಡೆ ಮಾಡಿದ್ದಾಗ ಉಳಿತಾಯವಾಗುತ್ತದೆ. ಉಳಿದ ಶುಲ್ಕನ್ನು ಮುಂದಿನ ವರ್ಷದಲ್ಲಿ ವಿನಿಯೋಗಿಸಲು ಮಾರ್ಗಸೂಚಿಗಳಲ್ಲಿ ಅವಕಾಶವಿರುತ್ತದೆ.

ಉ) ಎಲ್ಲಾ ಯೋಜನೆಗಳ ಮಾರ್ಗಸೂಚಿಗಳು ಹೆಚ್ಚಿನ ಪುಟಗಳಾಗುವುದರಿಂದ ಪ್ರತ್ಯೇಕವಾಗಿ ಒದಗಿಸಲಾಗುವುದು ಅಲ್ಲದೆ, ಮಾರ್ಗಸೂಚಿಗಳು http://rural.nic.in/ website ನಲ್ಲಿ ಸಹ ಲಭ್ಯವಿರುತ್ತವೆ.

ಅನುಬಂಧ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ 2007–08, 2008–09 ಮತ್ತು 2009–10 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆಗಳ ವಿವರಗಳು

ಕ್ರ.ಸಂ.	ಯೋಜನೆಯ ಹೆಸರು	ಷರಾ
1	ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ	ಈ ಕಾರ್ಯಕ್ರಮವು 2008–09ನೇ ಸಾಲಿನಿಂದ ಅನ್ವಯವಾಗುವಂತೆ ಎನ್.ಆರ್.ಇ.ಜಿ.ಎ. ಕಾರ್ಯಕ್ರಮದಲ್ಲಿ ವಿಲೀನಗೊಳಿಸಲಾಗಿದೆ.
2	ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ	
3	ಸ್ವರ್ಣ ಜಯಂತಿ ಗ್ರಾಮ ಸ್ವರೋಜ್ ಗಾರ್ ಯೋಜನೆ	
4	ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ	
5	ಗ್ರಾಮೀಣ ನೀರು ಸರಬರಾಜು ಯೋಜನೆ (ಕೇಂದ್ರ)	
6	12ನೇ ಹಣಕಾಸು ಯೋಜನೆ– ರಸ್ತೆ ಸುಧಾರಣೆ	
7	12ನೇ ಹಣಕಾಸು ಯೋಜನೆ– ಕಟ್ಟಡ ನಿರ್ವಹಣೆ	
8	ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ	
9	ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮ	
10	12ನೇ ಹಣಕಾಸು ಆಯೋಗದ ಅನುದಾನ – ಪಂಚಾಯತ್‌ರಾಜ್ ಸಂಸ್ಥೆಗಳು	
11	ಸಂಪೂರ್ಣ ನೈರ್ಮಲ್ಯ ಯೋಜನೆ	
12	ಬಿ.ಆರ್.ಜಿ.ಎಫ್. (ಸಮ ವಿಕಾಸ)	